ಜಿಲ್ಲಾ ಪರಿಷತ್ತುಗಳು ಮಂಡಲ ಪಂಚಾಯಿತಿಗಳಿಗೆ ಸಮಾನವಾಗಿ ಹಣವನ್ನು ಹಂಚುವಂತೆ ಆದೇಶ ನೀಡುವ ಬಗ್ಗೆ

೫೦೨೭. ಶ್ರೀ ಕೆ. ವಸಂತ ಬಂಗೇರ .(ಬೆಳ್ತಂಗಡಿ).—ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಎಲ್ಲಾ ಜಿಲ್ಲಾಪರಿಷತ್ತುಗಳಿಗೆ ಒದಗಿಸಿದ ಹಣವನ್ನು ತಾಲ್ಲೂಕಿನ ಮಂಡಲ ಪಂಚಾಯತ್‌ಗಳಿಗೆ ಸಮಾನವಾಗಿ ಹಂಚದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಈ ಹಣವನ್ನು ಜಿಲ್ಲಾ ಪರಿಷತ್ತುಗಳು ಸಮಾನವಾಗಿ ಹಂಚುವಂತೆ ಆದೇಶ ನೀಡಲು ಕ್ರಮ ಕೈಗೊಳ್ಳಲಾಗುವುದೇ ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಶೃಂಗೇರಿ ತಾಲ್ಲೂಕಿನಲ್ಲಿ ಸೊಪ್ಪಿನಬೆಟ್ಟ ಪ್ರದೇಶವನ್ನು ಸಾರ್ವಜನಿಕರ ಬಳಕೆಗಾಗಿ ಮಂಜೂರು ಮಾಡುವ ಬಗ್ಗೆ

೫೦೩೮. ಶ್ರೀ ಗೋವಿಂದೇಗೌಡ (ಶೃಂಗೇರಿ) —ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಶೃಂಗೇರಿ ತಾಲ್ಲೂಕಿನಲ್ಲಿ ಪ್ರಸ್ತುತ ಸೊಪ್ಪಿನಬೆಟ್ಟ ಪ್ರದೇಶವು ಹೆಚ್ಚಾಗಿದ್ದು ಇದರಿಂದ ಬಡ ಜನರಿಗೆ ಸರ್ಕಾರದ ಯೋಜನೆಯಂತೆ ಜನತಾ ನಿವೇಶನಗಳನ್ನು ವಿತರಿಸಲು ತೊಂದರೆಯಾಗಿರುವುದು ನಿಜವೇ ?

ಆ) ಸರ್ಕಾರದವರು ಸೊಪ್ಪಿನಬೆಟ್ಟ ಪ್ರದೇಶದಲ್ಲಿ ಕಡಿಮೆ ಮರಗಳು ಇರುವ ಪ್ರದೇಶವನ್ನು ಸಾರ್ವಜನಿಕರ ಉಪಯೋಗಕ್ಕೆ ಹಾಗೂ ಜನತಾ ಮನೆಗಳ ನೈಟುಗಳಿಗೆ ಬಿಡುಗಡೆ ಮಾಡಲು ಸರ್ಕಾರದವರು ಕ್ರಮ ಕೈಗೊಳ್ಳುವರೆ ?

ಶ್ರೀ ಆರ್. ವಿ. ದೇಶಪಾಂಡೆ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

ಅ) ಇಲ್ಲ.

ಆ) ಸದರಿ ಕ್ಷೇತ್ರಾಭಿವೃದ್ಧಿ ಅಧಿಕಾರಿಯು ಸೊಪ್ಪಿನಬೆಟ್ಟ ಪ್ರದೇಶದಲ್ಲಿ ಗುರುತಿಸಲ್ಪಟ್ಟ ೧೦ ಗುಂಟೆ ಜಮೀನನ್ನು ಸಾರ್ವಜನಿಕರ ಉಪಯೋಗಕ್ಕೆ ಬಿಡುಗಡೆ ಮಾಡಲು ಜಿಲ್ಲಾಧಿಕಾರಿಗಳಿಗೆ ಅಧಿಕಾರವಿದೆ. ಉಳಿದ ಪ್ರಕರಣಗಳಲ್ಲಿ ಸರ್ಕಾರದ ಅನುಮತಿ ಬೇಕಾಗಿರುತ್ತದೆ.

ಶಹಾಪುರ ಪಟ್ಟಣದ ನೀರು ಅಭಾವ ಪರಿಹಾರ

೫೦೪೦. ಶ್ರೀ ಶಿವಶೇಖರಗೌಡ ಶಿರವಾಳ (ಶಹಾಪುರ).—ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಶಹಾಪುರ ಪಟ್ಟಣದ ನೀರಿನ ಅಭಾವವನ್ನು ಶಾಶ್ವತವಾಗಿ ಪರಿಹರಿಸುವ ಸಲುವಾಗಿ ಭೀಮಾ ನದಿಯಿಂದ ನೀರೊದಗಿಸುವ ಬಗ್ಗೆ ಅಂದಾಜು ತಯಾರಾಗಿದ್ದುದು ನಿಜವೆ ?

ಆ) ಹಾಗಿದ್ದಲ್ಲಿ, ಸದರಿ ಯೋಜನೆಯನ್ನು ಕೈಬಿಟ್ಟು ಕೃಷ್ಣಾ ಮೇಲ್ದಂಡೆ ಯೋಜನೆಯಿಂದ ನೀರು ಸರಬರಾಜು ಮಾಡಲು ಪರ್ಯಾಯ ಯೋಜನೆಯನ್ನು ತಯಾರಿಸುತ್ತಿರುವುದೂ ನಿಜವೆ ?

ಇ) ಹಾಗಿದ್ದಲ್ಲಿ, ಯಾವುದಾದರೂ ಒಂದು ಯೋಜನೆಯನ್ನು ಕಾರ್ಯಗತಗೊಳಿಸಿ ಶಹಾಪುರ ಪಟ್ಟಣದ ನೀರಿನ ಅಭಾವವನ್ನು ಶಾಶ್ವತವಾಗಿ ಪರಿಹರಿಸಲು ಕ್ರಮ ಕೈಗೊಳ್ಳಲಾಗುವುದೆ ?

ಶ್ರೀ ಆರ್. ವಿ. ದೇಶಪಾಂಡೆ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

ಅ) ಹೌದು.

ಆ) ಹೌದು.

ಇ) ಕ್ರಮ ಕೈಗೊಳ್ಳಲಾಗುವುದು.

ರಾಜ್ಯದಲ್ಲಿ ಗೃಹ ನಿರ್ಮಾಣ ಸಂಸ್ಥೆಯಿಂದ ನಿರ್ಮಿಸಲಾಗಿರುವ ಮನೆಗಳು

೫೦೩೭. ಶ್ರೀ ಆರ್. ಎನ್. ನಾಯ್ಕ (ಭಟ್ಕಳ).—ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಗೃಹ ನಿರ್ಮಾಣ ಸಂಸ್ಥೆಯಿಂದ ೮೫-೮೬ ರಿಂದ ಈವರೆಗೆ ಪ್ರತಿ ವರ್ಷ ಎಷ್ಟು ಮನೆಗಳನ್ನು ಕಟ್ಟಿಸಿದೆ ?

ಆ) ಪ್ರಸಕ್ತ ವರ್ಷ ಇನ್ನೂ ಹಂಚಿಕೆಯಾಗದೆ ಕಟ್ಟಿಸಿದ ಮನೆಗಳು ರಾಜ್ಯದಲ್ಲಿ ಎಷ್ಟಿವೆ ? (ಜಿಲ್ಲಾವಾರು ಮಾಹಿತಿ ನೀಡುವುದು)

ಇ) ಉತ್ತರ ಕನ್ನಡ ಜಿಲ್ಲೆಯಲ್ಲಿ ಕರ್ನಾಟಕ ಗೃಹ ನಿರ್ಮಾಣ ಮಂಡಳಿಯು ಕಟ್ಟಿಸಿದ ಮನೆಗಳನ್ನು ಎಂದಾದರೂ ಲೋಕೋಪಯೋಗಿ ಇಲಾಖೆಗೆ ವಹಿಸಿಕೊಡಲಾಗಿದೆಯೇ ? ಹಾಗಿದ್ದಲ್ಲಿ ಅಂತಹ ಮನೆಗಳ ಸಂಖ್ಯೆ ತಾಲ್ಲೂಕುವಾರು ಮಾಹಿತಿ ನೀಡುವುದು ?

ಈ) ಮನೆಗಳನ್ನು ಲೋಕೋಪಯೋಗಿ ಇಲಾಖೆಗೆ ಮಾಡಿದ್ದಲ್ಲಿ ಅಥವಾ ವಹಿಸಿಕೊಟ್ಟಿದ್ದಲ್ಲಿ ತಿರುಗಿ ಪಡೆದು ಮನೆಗಳಲ್ಲಿ ವಾಸಿಸುತ್ತಿರುವವರಿಗೆ ಮಾರಲು ಸಾಧ್ಯವೇ ?

ಶ್ರೀ ಆರ್. ವಿ. ದೇಶಪಾಂಡೆ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು) —

ಅ) ಕರ್ನಾಟಕ ಗೃಹ ಮಂಡಳಿಯು ೧೯೮೫-೮೬ ರಿಂದ ಈವರೆಗೆ ೧೧,೭೭೧ ಮನೆಗಳನ್ನು ಕಟ್ಟಿಸಿದೆ.

೧೯೮೫-೮೬	–	೩೯೨೫
೮೬-೮೭	–	೩೨೦೪
೮೭-೮೮	–	೪೪೯೬
೮೮-೮೯	–	೩೫೩
(ಆಗಸ್ಟ್‌ವರೆಗೆ)		೧೧,೭೭೧

ಆ) ಪ್ರಸಕ್ತ ವರ್ಷ ಹಂಚಿಕೆಯಾಗದೆ ಇರುವ ಮನೆಗಳ ಪಟ್ಟಿಯನ್ನು ಲಗತ್ತಿಸಲಾಗಿದೆ.

ಇ) ಉತ್ತರ ಕನ್ನಡ ಜಿಲ್ಲೆಯಲ್ಲಿ ಕರ್ನಾಟಕ ಗೃಹ ಮಂಡಳಿ ಕಟ್ಟಿಸಿದ ಮನೆಗಳನ್ನು ಲೋಕೋಪಯೋಗಿ ಇಲಾಖೆಗೆ ವಹಿಸಿಕೊಟ್ಟಿರುವ ಮನೆಗಳ ಪಟ್ಟಿಯನ್ನು ಲಗತ್ತಿಸಲಾಗಿದೆ.

ಈ) ಮನೆಗಳನ್ನು ಲೋಕೋಪಯೋಗಿ ಇಲಾಖೆಗೆ ಈಗಾಗಲೇ ವರ್ಗಾಯಿಸಿ ಈ ಮನೆಗಳ ಬಗ್ಗೆ ಪಾವತಿ ಮಾಡಬೇಕಾಗಿದ್ದ ಹಣದಲ್ಲಿ ಭಾಗಶಃ ಸದರಿ ಇಲಾಖೆಯು ಮಂಡಳಿಗೆ ಈಗಾಗಲೇ ತುಂಬಿರುವುದರಿಂದ ಈ ಮನೆಗಳನ್ನು ಲೋಕೋಪಯೋಗಿ ಇಲಾಖೆಯಿಂದ ವಾಪಸ್ಸು ಪಡೆದು ಮನೆಗಳಲ್ಲಿ ವಾಸಿಸುತ್ತಿರುವವರಿಗೆ ಮಾರಲು ಸಾಧ್ಯವಿಲ್ಲ.